ಶ್ರೀ ಪಿ. ಜಿ. ಆರ್. ಸಿಂಧ್ಯ.—ವಿಚಿತವಾದ ಅಂಕಿ ಅಂಶಗಳು ನನ್ನಲ್ಲಿ ಇಲ್ಲ. ಇದು ಶಿಕ್ಷಣ ಇಲಾಖೆಗೆ ಬರತಕ್ಕ ವಿಷಯ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡತಕ್ಕ ಸಂದರ್ಭದಲ್ಲಿ ಪ್ರಪೋರ್ಮ ನೇಟ್ ರೇಷಿಯೋ ಪ್ರಕಾರ.....

ಶ್ರೀ ಬಿ. ಬಸವಲಿಂಗಪ್ಪ.—ಏನು ಸ್ವಾಮಿ ಮಂತ್ರಿಗಳಾಗಿ.....

ಅಧ್ಯಕ್ಷರು.—ಕುಳಿತುಕೊಂಡು ಮಾತನಾಡುವುದು ಮೊದಲನೆಯ ತಪ್ಪು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಿದ್ದರಾಮಯ್ಯನವರಿಗೆ ಈ ಒಂದು ವರ್ಗದ ಬಗ್ಗೆ ಹೆಚ್ಚಿನ ಆಸಕ್ತಿ ಇದ್ದರೆ ಒಳ್ಳೆಯದು ಅವರು ಅಡ್ಡಿ ಮಾಡಿ ಮಾತನಾಡುವುದು ಸರಿಯಿಲ್ಲ.

ಶ್ರೀ ಸಿದ್ದರಾಮಯ್ಯ.—ಸಮಾಜ ಕಲ್ಯಾಣ ಇಲಾಖೆಯ ವಿಚಾರಬಂದಾಗ ಮಾನ್ಯ ಬಸವಲಿಂಗಪ್ಪನವರು ನಿಂತಾ ಬಿಡುತ್ತಾರೆ ಅವರು ನಮಗಿಂತ ಹಿರಿಯರಿಂದ ಮಾತನಾಡುತ್ತಾರೆ. ನಾನು ಅವರಿಗೆ ಅಡ್ಡಿ ಬರಲಿಲ್ಲ.

ಶ್ರೀ ಎಂ. ಶಿವಣ್ಣ.—ಪಿಯುಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ರಾಜ್ಯದ ೩೦ ಜಿಲ್ಲೆಗಳಲ್ಲಿಯೂ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತಿನ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಬರಬೇಕೆಂದರೆ ಕಷ್ಟವಾಗುತ್ತದೆ. ಗ್ರಾಮಾಂತರ ವಂಕ್ಕಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಈ ಇಲಾಖೆಯ ಮೇಲ್ವಿಚಾರಣೆಯನ್ನು ಜಿಲ್ಲಾ ಪರಿಷತ್‌ಗೆ ವಹಿಸಿಕೊಡಲಾಗಿದೆ. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಪ್ರಸ್ತಾವನೆಯನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಯನ್ನು ಮುಂದಿನ ಅಧಿವೇಶನದೊಳಗೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸಾರಿಗೆ ಸಂಸ್ಥೆಯ ಸಿಬ್ಬಂದಿ ಹಾಗೂ ಬಸ್ಸುಗಳ ಬಗ್ಗೆ

೪೦೭೧. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಸಾರಿಗೆ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಹೊಸ ಸರಕಾರಿ ಬಸ್ಸುಗಳನ್ನು ಹಾಕಲಾಗಿದೆ ? ಅವುಗಳಲ್ಲಿ ಎಷ್ಟು ದುರಸ್ತಿಯಲ್ಲಿವೆ.

ಆ) ಈ ಜಿಲ್ಲೆಯ ಸಾರಿಗೆ ಸಂಸ್ಥೆ ವಿಭಾಗದ ಡಿವಿಜನಲ್ ಕಂಟ್ರೋಲರ್‌ರವರ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗುಲ್ಬರ್ಗಾ ವಿಭಾಗದಲ್ಲಿ ಹಾಲಿ ೬೨೯ ವಾಹನಗಳನ್ನು ಹಾಕಲಾಗಿದ್ದು ಈ ಪೈಕಿ ೫೭೫ ಗಾಡಿಗಳು ಓಡುತ್ತಿವೆ ಮಿಕ್ಕ ೫೪ ವಾಹನಗಳು ದುರಸ್ತಿಯಲ್ಲಿವೆ ಈ ವಿಭಾಗವು ದಿನಾಂಕ ೭-೧೧-೮೫ರಂದು ರಾಷ್ಟ್ರೀಕರಣವಾಯಿತು ಅಂದಿನಿಂದ ಇಂದಿನವರೆಗೆ ಈ ವಿಭಾಗಕ್ಕೆ ಹಾಕಿರುವ ಹೊಸ ಬಸ್ಸುಗಳ ವಿವರ ಈ ಕೆಳಕಂಡಂತಿದೆ.

೧೯೮೪-೮೫	೪೩
೧೯೮೫-೮೬	೯೮
೧೯೮೬-೮೭	೧೦೪
೧೯೮೭-೮೮	೭೨
೧೯೮೮-೮೯	೩೮ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ)

ಆ) ಬಂದಿದೆ ಪ್ರಾರಂಭಿಕ ವಿಚಾರಣೆಯನ್ನು ಈಗಾಗಲೇ ಮಾಡಿ ಇಲಾಖಾ ಕ್ರಮವನ್ನು ಜರುಗಿಸಲಾಗುತ್ತಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಸಭಾಪತಿಯವರೇ, ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ವಿಷಯ ಗಮನಕ್ಕೆ ಬಂದಿಲ್ಲ ಈಗಾಗಲೇ ಇಲಾಖಾ ಕ್ರಮವನ್ನು ಜರುಗಿಸಲಾಗುತ್ತಿದೆ ಎಂದಿದ್ದಾರೆ. ಅಲ್ಲಿನ ಡಿವಿಜನಲ್ ಕಂಟ್ರೋಲರ್ ಅವ್ಯವಹಾರ ಎಷ್ಟು ನಡೆಯುತ್ತಿದೆ ಎಂದರೆ ಸಿಬ್ಬಂದಿ ನೇಮಕಾತಿಯಲ್ಲಿ ಹಣ ಇಲ್ಲದೇ ಯಾವುದೇ ಸೇರ್ಪಡೆ ಮಾಡುವುದಿಲ್ಲ. ಇದರಿಂದಾಗಿ ಅಲ್ಲಿಯ ವ್ಯವಹಾರ ಸಂಪೂರ್ಣವಾಗಿ ಕೆಟ್ಟಿದೆ ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಸಿದ್ದರಾಮಯ್ಯ. – ಸಭಾಪತಿಯವರೇ, ಮಾನ್ಯ ಸದಸ್ಯರು ಅಲ್ಲಿಯ ವಿಭಾಗಾಧಿಕಾರಿಗಳ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಬಂದಿದೆ ಎಂದು ನಾವು ಹೇಳಿದ್ದೇವೆ ಈಗಾಗಲೇ ಅವರಿಗೆ ಸಮಜಾಯಿಷಿ ನೋಟಿಸ್ ಕೊಟ್ಟು ಸಮಜಾಯಿಷಿಯನ್ನು ಕೂಡ ಪಡೆಯಲಾಗಿದೆ ಮತ್ತೆ ಈ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು.

ವಿಶೇಷ ಘಟಕ ಯೋಜನೆ

೫೦೨೦. **ಶ್ರೀ ಜಿ. ಬಸವಲಿಂಗಪ್ಪ** (ಯಲಹಂಕ) —ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವೆಗಳು ಮತ್ತು ಕ್ರೀಡೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ವಿಶೇಷ ಘಟಕ ಯೋಜನೆಗೆ ಭಾರತ ಸರ್ಕಾರದಿಂದ ಬಂದಿರುವ ಹಣ ಎಷ್ಟು ?

ಆ) ಈ ಮೊತ್ತಕ್ಕನುಗುಣವಾಗಿ ವಿವಿಧ ಬಾಬುಗಳಿಗೆ ನೀಡಿರುವ ಅನುದಾನವೆಷ್ಟು ?

ಇ) ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು ಮತ್ತು ಸಾರ್ವಜನಿಕರಿಗೆ ವಿಚ್ರ್ಯು ಮಾಡಲು ಉದ್ದೇಶಿಸಿರುವ ಬಾಬ್ತುಗಳು ಯಾವುವು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡೆಗಳ ಸಚಿವರು).—

ಅ) ೧೯೮೮-೮೯ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳ ಜಾರಿಗಾಗಿ ಭಾರತ ಸರ್ಕಾರವು ೪೪೧.೦೦ ಲಕ್ಷ ರೂಪಾಯಿಗಳ ವಿಶೇಷ ಕೇಂದ್ರ ನೆರವನ್ನು ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿದೆ.

ಆ) ರಾಜ್ಯ ಯೋಜನೆಯಿಂದ ೪೪೧೩.೧೦ ಲಕ್ಷ ರೂಪಾಯಿಗಳನ್ನು ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳ ಜಾರಿಗಾಗಿ ನಿಗದಿಪಡಿಸಲಾಗಿದೆ. ವಿವಿಧ ಇಲಾಖೆಗಳ ವಿವರಗಳನ್ನು ಅನುಬಂಧ ೧೧ ರಲ್ಲಿ ಸೂಚಿಸಲಾಗಿದೆ.

ಇ) ವಿಶೇಷ ಘಟಕ ಯೋಜನೆಯನ್ನು ಪರಿಶಿಷ್ಟ ಜಾತಿಯವರಿಗಾಗಿ ಮಾತ್ರ ಜಾರಿಗೊಳಿಸಲಾಗುತ್ತಿದೆ. ವಿಶೇಷ ಘಟಕ ಯೋಜನೆಯ ವಿಶೇಷ ಕೇಂದ್ರ ನೆರವು ಮತ್ತು ರಾಜ್ಯ ಯೋಜನಾ ಮೊತ್ತದ ಇಲಾಖಾವಾರು ಹಂಚಿಕೆಯನ್ನು ಅನುಬಂಧ-೧ ಮತ್ತು ೨ ರಲ್ಲಿ ನೀಡಲಾಗಿದೆ.